ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು

**ಸಿ.ಸಿ.ನಂಃ1129/2017**

ಫಿರ್ಯಾದಿ :- ಆರಕ್ಷಕ ಉಪ-ನಿರೀಕ್ಷಕರು,
ಅರಕಲಗೂಡು ಪೊಲೀಸ್ ಠಾಣೆ,
ಅರಕಲಗೂಡು

ವಿರುದ್ಧ

ಆರೋಪಿ :- ಕುಮಾರ.ಎಂ.ಡಿ

:: ದೋಷಾರೋಪಣೆ ::

ಶ್ರೀ.ಯೋಗೇಶ್, ಎಂ.ಎ. ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಕಲಗೂಡು ಆದ ನಾನು,

ಕುಮಾರ.ಎಂ.ಡಿ ಬಿನ್ ದ್ಯಾವಯ್ಯ,
38 ವರ್ಷ, ಮಾದಿಹಳ್ಳಿ ಗ್ರಾಮ,
ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು

ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿಃ07/05/2017 ರಂದು ಸಾಕ್ಷಿ-1 ರವರು ಸಾಕ್ಷಿ-2 ಮತ್ತು 3 ರವರೊಂದಿಗೆ ಹೊಳೆನರಸೀಪುರದಿಂದ ಅರಕಲಗೂಡಿಗೆ ಬರಲು ನಿಮ್ಮ ಬಾಬ್ತು ಕೆಎ-13-ಎ-2625 ರ ಟ್ರ್ಯಾಕ್ಸ್ ವಾಹನದಲ್ಲಿ ಕುಳಿತುಕೊಂಡು ಬರುತ್ತಿರುವಾಗ ಮಾರ್ಗ ಮಧ್ಯ ಬರುವ ಹಳ್ಳಿಗಳ ಜನರನ್ನು ಹತ್ತಿಸಿಕೊಂಡು ತನ್ನ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಹೊನ್ನವಳ್ಳಿ ಹತ್ತಿರ ರಸ್ತೆಯ ಎಡಬದಿಯ ಕಲ್ಲಿಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಅತಿವೇಗ ಮತ್ತು ಅಜಾಗರೂಕತೆಯಿಂದ ಟ್ರ್ಯಾಕ್ಸ್ ನ್ನು ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿದ ಪರಿಣಾಮ ಸಾಕ್ಷಿ-2, 3, 7, 8, 9, 11 ರವರಿಗೆ ಸಾಮಾನ್ಯ ಸ್ವರೂಪದ

ಗಾಯಗಳಾಗಲು ಕಾರಣರಾಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ337 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಅತಿವೇಗ ಮತ್ತು ಅಜಾಗರೂಕತೆಯಿಂದ ಟ್ರ್ಯಾಕ್ಸ್ ನ್ನು ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿದ ಪರಿಣಾಮ ಸಾಕ್ಷಿ-1, 4, 5, 6, 10 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಲು ಕಾರಣರಾಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಅತಿವೇಗ ಮತ್ತು ಅಜಾಗರೂಕತೆಯಿಂದ ಟ್ರ್ಯಾಕ್ಸ್ ನ್ನು ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿದ ಪರಿಣಾಮ ಸರಸಾಮಣಿ ಮತ್ತು ಸುನಂದರವರಿಗೆ ತೀವ್ರ ತರಹದ ಗಾಯಗಳಾಗಿ ಚಿಕಿತ್ಸೆ ಪಡೆಯುತ್ತಿರುವಾಗ ಮೃತಪಡಲು ಕಾರಣರಾಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಭಾ.ದಂ.ಸಂ.ಕಲಂಃ304(ಎ)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಚಾಲನಾ ಪರವಾನಗಿ ಇಲ್ಲದೆ ವಾಹನವನ್ನು ಚಲಾಯಿಸಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದ್ದು, ನೀವು ಮೋಟಾರ್ ವಾಹನ ಕಾಯ್ದೆ ಕಲಂಃ3 ಸಹವಾಚಕ ಕಲಂಃ181 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಅರಕಲಗೂಡು

1. ನಿಮಗೆ ಮೇಲೆ ವಿವರಿಸಲಾದ ಆಪಾದನೆಯ ವಿವರಗಳು ತಿಳಿಯಿತೇ?
ಉತ್ತರಃ-

2. ಮೇಲೆ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬಯಸುವಿರಾ?
ಉತ್ತರಃ-

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಅರಕಲಗೂಡು.